# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 812(996) |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.12.2024 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಹೆಬ್ಬಾಳ ಮತ್ತು ಹೆಬ್ಬಾಳ ಅಮ್ಮಣ್ಣಿಕೆರೆ ಗ್ರಾಮದ ಕೆ.ಐ.ಎ.ಡಿ.ಬಿ ವಶದಲ್ಲಿರುವ 55 ಎಕರೆ ಪ್ರದೇಶ ಜಾಗವನ್ನು ಬಿ.ಎಂ.ಆರ್.ಸಿ.ಎಲ್ ಕಿತ್ತಳೆ ಮಾರ್ಗವನ್ನು ಹೆಬ್ಬಾಳ ನಿಲ್ದಾಣ ನಿರ್ಮಿಸಲು ಸ್ಥಳ ಕೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಜಾಗವನ್ನು ಬಿ.ಎಂ.ಆರ್.ಸಿ.ಎಲ್ ರವರಿಗೆ ನೀಡಲು ಇರುವ ಸಮಸ್ಯೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಹೌದು.<br>ಬಿ.ಎಂ.ಆರ್.ಸಿ.ಎಲ್. ಸಂಸ್ಥೆಯ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಆ) | ಹೆಬ್ಬಾಳ ಮತ್ತು ಹೆಬ್ಬಾಳ ಅಮ್ಮಣ್ಣಿಕೆರೆ ಗ್ರಾಮದ ಕೆಐಎಡಿಬಿ ವಶದಲ್ಲಿರುವ 55 ಎಕರೆ ಪ್ರದೇಶ ಜಾಗಕ್ಕೆ ಕೆಐಎಡಿಬಿ ರವರಿಂದ ನೀಡಿದ ಪರಿಹಾರ ಧನ ಎಷ್ಟು; ಎಷ್ಟು ಎಕರೆಗೆ ಪರಿಹಾರ ನೀಡಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | 1. M/s Lakeview Tourism Corporation Ltd., ಇವರಿಗೆ ಏಕಘಟಕ ಸಂಕೀರ್ಣ ಯೋಜನೆಯಡಿ ಕೆಐಎಡಿಬಿಯು ಭೂಸ್ವಾಧೀನ ಮಾಡುತ್ತಿದ್ದು, ದಿನಾಂಕ:11.05.2004 ರಂದು 55-13 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.<br>2. ಬೆಂಗಳೂರು ಉತ್ತರ ತಾಲ್ಲೂಕು ಹೆಬ್ಬಾಳ ಮತ್ತು ಹೆಬ್ಬಾಳ ಅಮಾನಿಕರೆ ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಒಟ್ಟು 51-08¾ ಎಕರೆ ಜಮೀನುಗಳಿಗೆ ದಿನಾಂಕ: 27-03-2023 ರಂದು ಜರುಗಿದ ಮಂಡಳಿ ಸಭೆಯಲ್ಲಿ ಎಕರೆ ಒಂದಕ್ಕೆ ರೂ.12.10 ಕೋಟಿ ಭೂದರ ನಿಗದಿಪಡಿಸಿ ನಿರ್ಣಯಿಸಲಾಗಿರುತ್ತದೆ.<br>3. ಅದರಂತೆ, ಕಂಪನಿಯವರಿಗೆ ಮಂಡಳಿಯು ನಿರ್ಧರಿಸಿರುವ ಮೊತ್ತವನ್ನು ಪಾವತಿಸಲು ದಿನಾಂಕ:06.06.2023ರಂದು ನೋಟೀಸ್ ನೀಡಲಾಗಿದೆ. ಕಂಪನಿಯವರು ಇನ್ನೂ ಪಾವತಿ ಮಾಡಿರುವುದಿಲ್ಲ. ಕಂಪನಿಯು ಪಾವತಿಸಿದ ನಂತರ, ಸಂಬಂಧಪಟ್ಟ ಭೂಮಾಲೀಕರಿಗೆ ಪರಿಹಾರ ನೀಡಲಾಗುತ್ತದೆ. |

| | | |
|---|---|---|
| | | 4. ಅಲ್ಲದೇ, ದಿನಾಂಕ:27-03-2023 ರಂದು ಜರುಗಿದ ಮಂಡಳಿಯ ಸಭೆಯ ನಿರ್ಣಯದಂತೆ ಹೆಬ್ಬಾಳ ಗ್ರಾಮದ ಸರ್ವೆ ನಂ.75/2 ಮತ್ತು ಇತರೆ ಸರ್ವೆ ನಂಬರ್‌ಗಳ ಪೈಕಿ 6290.32 ಚ.ಮೀ. ಮತ್ತು 422.65 ಚ.ಮೀ. ಸೇರಿ ಒಟ್ಟು 6712.97 ಚ.ಮೀ. ಜಮೀನಿಗೆ ಮೆಟ್ರೋ ಭೂಸ್ವಾಧೀನ ಸಂಬಂಧ ಬಿ.ಎಂ.ಆರ್.ಸಿ.ಎಲ್. ಸಂಸ್ಥೆಯು ಕೆಐಎಡಿಬಿ ಗೆ ಪಾವತಿಸಿದ ರೂ.20,11,62,500/- ಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ-2, ಬೆಂಗಳೂರು ಇವರಿಗೆ ದಿನಾಂಕ:28-08-2024 ರಂದು ಅನುದಾನ ಬಿಡುಗಡೆ ಮಾಡಿದ್ದು, ಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿದೆ. |

**(ಸಂಖ್ಯೆ:ಸಿಐ 543 ಐಎಪಿ 2024)**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು